ಹಾಲಿವುಡ್

# ತಡವಾಗಿ ಬರಲಿದ್ದಾನೆ ಬಾಂಡ್ 23



'ಬಾಂಡ್ 23' ಚಿತ್ರದ ಹೀರೋ ಡೇನಿಯಲ್ ಕ್ರೇಗ್

## ಬಾಂಡ್ ಚಿತ್ರಗಳ ಪಟ್ಟಿ

1. ಡಾ.ನೋ –1962– ಸೀನ್ ಕಾನರಿ, ಉರ್ಸುಲಾ ಆ್ಯಂಡ್ರೆಸ್
2. ಫ್ರಾಂ ರಷ್ಯಾ ವಿತ್ ಲವ್– 1963– ಸೀನ್ ಕಾನರಿ
3. ಗೋಲ್ಡ್‌ಫಿಂಗರ್ –1964–ಸೀನ್ ಕಾನರಿ
4. ಥಂಡರ್‌ಬಾಲ್ –1965– ಸೀನ್ ಕಾನರಿ.
5. ಯು ಓನ್ಲಿ ಲಿವ್ ಟ್ವೈಸ್ –1967– ಸೀನ್ ಕಾನರಿ.
6. ಆನ್ ಹರ್ ಮೆಜೆಸ್ಟೀಸ್ ಸೀಕ್ರೆಟ್ ಸರ್ವಿಸ್–1969 – ಜಾರ್ಜ್ ಲೆಜೆನ್ಬಿ.
7. ಡೈಮಂಡ್ಸ್ ಆರ್ ಫಾರ್‌ಎವರ್ –1971 – ಸಿಯಾನ್ ಕಾನ್ರಿ.
8. ಲಿವ್ ಆ್ಯಂಡ್ ಲೆಟ್ ಡೈ –1973 – ರೋಜರ್ ಮೂರ್.
9. ದಿ ಮ್ಯಾನ್ ವಿತ್ ದಿ ಗೋಲ್ಡನ್ ಗನ್ –1974 – ರೋಜರ್ ಮೂರ್.
10. ದಿ ಸ್ಪೈ ಹೂ ಲವ್ಡ್ ಮೀ –1977 – ರೋಜರ್ ಮೂರ್.
11. ಮೂನ್‌ರೇಕರ್ –1979 – ರೋಜರ್ ಮೂರ್.
12. ಫಾರ್ ಯುವರ್ ಐಸ್ ಓನ್ಲಿ –1981– ರೋಜರ್ ಮೂರ್.
13. ಆಕ್ಟೋಪಸಿ –1983 – ರೋಜರ್ ಮೂರ್.
14. ಎ ವಿವ್ ಟು ಕಿಲ್ –1985 – ರೋಜರ್ ಮೂರ್.
15. ದಿ ಲಿವಿಂಗ್ ಡೇಲೈಟ್ಸ್ –1987 – ತಿಮೋಥಿ ಡಾಲ್ಟನ್.
16. ಲೈಸೆನ್ಸ್ ಟು ಕಿಲ್ –1989 – ತಿಮೋಥಿ ಡಾಲ್ಟನ್.
17. ಗೋಲ್ಡನ್ ಐ –1995 – ಪಿಯರ್ಸ್ ಬ್ರೊಸ್ನ್ಯಾನ್.
18. ಟುಮಾರೊ ನೆವರ್ ಡೈಸ್ –1997 – ಪಿಯರ್ಸ್ ಬ್ರೊಸ್ನ್ಯಾನ್.
19. ದಿ ವರ್ಲ್ಡ್ ಈಜ್ ನಾಟ್ ಇನಫ್ –1999 – ಪಿಯರ್ಸ್ ಬ್ರೊಸ್ನ್ಯಾನ್.
20. ಡೈ ಎನದರ್ ಡೇ –2002 – ಪಿಯರ್ಸ್ ಬ್ರೊಸ್ನ್ಯಾನ್.
21. ಕ್ಯಾಸಿನೋ ರಾಯೇಲ್ –2006 – ಡೇನಿಯಲ್ ಕ್ರೇಗ್.
22. ಕ್ವಾಂಟಮ್ ಆಫ್ ಸೋಲೇಸ್ –2008 –ಡೇನಿಯೆಲ್ ಕ್ರೇಗ್.

ಸಾಕಷ್ಟು ಕುತೂಹಲ ಕೆರಳಿಸಿರುವ 'ಬಾಂಡ್ 23' ಚಲನಚಿತ್ರ ತೆರೆಗೆ ಬರುವುದು ಇನ್ನಷ್ಟು ತಡವಾಗಲಿದೆಯಂತೆ. 2012ರಲ್ಲಿ ಬಿಡುಗಡೆ ಆಗಬೇಕಾಗಿದ್ದ ಈ ಚಿತ್ರ ತಡವಾಗಿ ಬರಲು ಕಾರಣ ಆರ್ಥಿಕ ಮುಗ್ಗಟ್ಟು! ಬಾಂಡ್ ಸಿನಿಮಾಗಳನ್ನು ನಿರ್ಮಿಸುತ್ತಿರುವ ಎಂ.ಜಿ.ಎಂ (ಮೆಟ್ರೊ ಗೋಲ್ಡ್‌ವಿನ್–ಮೆಟ್ರೊ) ಕಂಪೆನಿಗೆ ಹಣಕಾಸಿನ ಅಡಚಣೆಯಾಗಿದೆಯಂತೆ. ಹೀಗಾಗಿ ಡೇನಿಯಲ್ ಕ್ರೇಗ್ ಅಭಿನಯದ 'ಬಾಂಡ್ 23' ಚಿತ್ರಕ್ಕಾಗಿ ಅಭಿಮಾನಿಗಳು ಮತ್ತೆ ಕೆಲವು ತಿಂಗಳು ಕಾಯುವುದು ಅನಿವಾರ್ಯ.

ಸ್ಯಾಮ್ ಮೆಂಡೆಜ್ ನಿರ್ದೇಶನದಲ್ಲಿ ಈ ಚಿತ್ರ ವರ್ಷಾಂತ್ಯಕ್ಕೆ ಶೂಟಿಂಗ್ ಆರಂಭಿಸಬೇಕಿತ್ತು. ಡೇನಿಯಲ್ ಕ್ರೇಗ್ ಮತ್ತು ರಾಚೆಲ್ ವೆಲ್ಸ್ ಅಭಿನಯದ ಈ ಚಿತ್ರ 2012ರಲ್ಲಿ ಬಿಡುಗಡೆಯಾಗಬೇಕಿತ್ತು. ಆದರೆ ಈಗಿನ ಪರಿಸ್ಥಿತಿ ನೋಡಿದರೆ 2014 ಅಥವಾ 2015ರಲ್ಲಿ ಬಿಡುಗಡೆಯಾಗುವ ಸಾಧ್ಯತೆಗಳಿವೆ.

### ಬಾಂಡ್ ಇತಿಹಾಸ

1962ರಲ್ಲಿ ಪ್ರಾರಂಭವಾದ ಜೇಮ್ಸ್ ಬಾಂಡ್ ಚಲನಚಿತ್ರಗಳ ಸರಣಿ ಇಲ್ಲಿಯವರೆಗೂ ಮುಂದುವರಿದುಕೊಂಡು ಬಂದಿದೆ. ಸುಮಾರು 50 ವರ್ಷಗಳಲ್ಲಿ ಕೇವಲ 22 ಚಿತ್ರಗಳನ್ನು ಮಾತ್ರ ನಿರ್ಮಿಸಲಾಗಿದೆ. ಇದು ಬಾಂಡ್ ಚಿತ್ರಗಳ ಗುಣಮಟ್ಟವನ್ನು ಎತ್ತಿ ತೋರಿಸುತ್ತದೆ.

1962ರಲ್ಲಿ ಮೊಟ್ಟಮೊದಲ ಜೇಮ್ಸ್ ಬಾಂಡ್ ಚಿತ್ರ 'ಡಾ. ನೋ' ಬಂತು. ಸೀನ್ ಕಾನರಿ ಬಾಂಡ್ ಆಗಿ ನಟಿಸಿದ್ದು, ಉರ್ಸುಲಾ ಆ್ಯಂಡ್ರೆಸ್ ಬಾಂಡ್ ಗರ್ಲ್ ಆಗಿ ನಟಿಸಿದ್ದರು. ಮೊದಲ ಯತ್ನದಲ್ಲಿಯೇ ಬಾಂಡ್ ಸಿನೇಮಾಕ್ಕೆ ವಿಶ್ವದಾದ್ಯಂತ ಮನ್ನಣೆ ದೊರಕಿತ್ತು.

ಎಂ–16 ಏಜೆಂಟ್ ಜೇಮ್ಸ್ ಬಾಂಡ್ (ಕೋಡ್ 007) ಎಂಬ ಬ್ರಿಟಿಷ್ ಪತ್ತೇದಾರನ ಕುರಿತು ಇಯಾನ್ ಫ್ಲೆಮಿಂಗ್ ಬರೆದ ಕಾಲ್ಪನಿಕ ಕಥೆಗಳುಳ್ಳ ಕಾದಂಬರಿಗಳನ್ನು ಆಧರಿಸಿ ಬಾಂಡ್ ಸಿನಿಮಾಗಳನ್ನು ತಯಾರಿಸಲಾಯಿತು.

ಆಲ್ಬರ್ಟ್ ಬ್ರೊಕ್ಕೊಲಿ ಮತ್ತು ಹ್ಯಾರಿ ಸಾಲ್ಟ್ಜಮನ್ ಸೇರಿಕೊಂಡು ಇಓಎನ್ ಫಿಲಂಸ್ ಬ್ಯಾನರ್ ಅಡಿಯಲ್ಲಿ 1975ರ ವರೆಗೆ ಬಾಂಡ್ ಚಿತ್ರಗಳನ್ನು ನಿರ್ಮಿಸಿದರು. ಮುಂದೆ ಆಲ್ಬರ್ಟ್ ಬ್ರೊಕ್ಕೊಲಿ ಸ್ವತಂತ್ರ ನಿರ್ಮಾಪಕರಾದರು. 1995ರಿಂದ ಆಲ್ಬರ್ಟ್ ಬ್ರೊಕೊಲಿ ಅವರ ಪುತ್ರಿ ಬಾರ್ಬರಾ ಬ್ರೊಕ್ಕೊಲಿ ನಿರ್ಮಾಪಕಿಯಾದರು. ಬಾಂಡ್ ಚಿತ್ರಗಳನ್ನೆಲ್ಲ ಯುನೈಟೆಡ್ ಆರ್ಟಿಸ್ಟ್ಸ್ (ಯುಎ) ಮೂಲಕವೇ ವಿತರಿಸಲಾಗುತ್ತಿತ್ತು. ಆದರೆ 1981ರಲ್ಲಿ ಮೆಟ್ರೊ ಗೋಲ್ಡ್‌ವಿನ್ ಮೇಯರ್ (ಎಂ.ಜಿ.ಎಂ) ಕಂಪನಿಯು ಯುಎ ಕಂಪೆನಿಯನ್ನು ಖರೀದಿಸಿತು. ಅಲ್ಲದೆ ಎಂಜಿಎಮ್/ಯುಎ ಕಂಪನಿಯಾಗಿ ಮಾರ್ಪಾಡಾಯಿತು. 1995ರವರೆಗೆ ಈ ಸಂಸ್ಥೆಯೇ ಚಿತ್ರ ವಿತರಣೆಯನ್ನು ಕೈಗೆತ್ತಿಕೊಂಡಿತು. ನಂತರ ಯುಎ ಕಂಪನಿ ಹಿಂದೆ ಸರಿದಿದ್ದರಿಂದ 2006ರಿಂದ ಎಂ.ಜಿ.ಎಂ ಮತ್ತು ಕೊಲಂಬಿಯಾ ಪಿಕ್ಚರ್ಸ್ ಜಂಟಿಯಾಗಿ ವಿತರಣೆಯನ್ನು ಪ್ರಾರಂಭಿಸಿವೆ.

ಇಂದು ಬಾಂಡ್ ಚಿತ್ರಗಳು ಅತ್ಯಂತ ಯಶಸ್ವಿ ಚಿತ್ರಗಳ ಸಾಲಿನಲ್ಲಿ 2ನೇ ಸ್ಥಾನದಲ್ಲಿದ್ದು, ಈವರೆಗೆ ವಿಶ್ವದಾದ್ಯಂತ (ಬಾಕ್ಸ್ ಆಫೀಸ್) 5 ಶತಕೋಟಿ ಡಾಲರ್ ಆದಾಯ ಗಳಿಸಿದೆ.

■ ಎಂ.ಎಂ. ಪಾಟೀಲ

